**Name of work: Construction of earthern embankment, spillway & allied works for proposed Dandavathy Reservoir Project in Soraba taluk, Shimoga district.**

## ~: ನಡುವಳಿ:~

ದಿನಾಂಕ: 10.08.2009ರಂದು ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಕನೀನಿನಿ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು ಇವರ ಕಛೇರಿಯಲ್ಲಿ ದಂಡಾವತಿ ಜಲಾಶಯ ಯೋಜನೆಯ ಅಣೆಕಟ್ಟು ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಯ ಟೆಂಡರ್ ಪೆಟ್ಟಿಗೆಯನ್ನು ತೆರೆಯಲಾಯಿತು.

ಸದರಿ ಕಾಮಗಾರಿಗಾಗಿ ಟೆಂಡರ್ ಪ್ರಕಟಣೆ ಸಂಖ್ಯೆ: 1/08–09 ದಿನಾಂಕ: 16.02.2009ರಲ್ಲಿ ಮಾನುಯಲ್ ಹಾಗೂ ಇ–ಟೆಂಡರ್ ಮೂಲಕ ಕರೆಯಲಾಗಿತ್ತು. ನಂತರ ಕೆಲವು ಕಾರಣಗಳಿಂದಾಗಿ ತಿದ್ದುಪಡಿ ಪ್ರಕಾರ ಮುಂದೂಡಲಾಗಿತ್ತು. ನಂತರ ತಿದ್ದುಪಡಿ ಸಂಖ್ಯೆ: 3/08–09 ದಿನಾಂಕ: 30.05.2009ರ ಪ್ರಕಾರ ದಿನಾಂಕ: 08.06.2009ರವರೆಗೆ ಅರ್ಜಿ ಸಲ್ಲಸಲು ಕಾಲಾವಕಾಶ ನೀಡಲಾಗಿತ್ತು. ಅದರ ಪ್ರಕಾರ 11 ಏಜೆನ್ಸಿಯವರು ಅರ್ಜಿಯನ್ನು ಸಲ್ಲಿಸಿದ್ದರು. ನಂತರ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: 6/09–10 ದಿನಾಂಕ: 07.07.2009ರ ಪ್ರಕಾರ ಖಾಲಿ ಟೆಂಡರ್ ಪುಸ್ತಕವನ್ನು ನೀಡುವ ದಿನಾಂಕವನ್ನು 24.07.2009ರಂದು ಸಂಜೆ 5.30 ಪಿಎಂ ಎಂದು ನಿಗದಿಗೊಳಿಸಲಾಗಿತ್ತು.

ನಂತರ ಅರ್ಜಿ ಸಲ್ಲಿಸಿರುವ 11 ಜನ ಏಜೆನ್ಸಿಗಳಲ್ಲಿ ಪೂರ್ವ ಅರ್ಹತಾ ಆಧಾರದ ಮೇಲೆ ಹತ್ತು ಜನ ಏಜೆನ್ಸಿಯವರಿಗೆ ಖಾಲಿ ಟೆಂಡರ್ ಪುಸ್ತಕವನ್ನು ನಿಗದಿಪಡಿಸಿದ ದಿನಾಂಕದಂದು ನೀಡಲಾಗಿತ್ತು. ಟೆಂಡರ್ ಪ್ರಕಟಣೆ ಸಂಖ್ಯೆ: 07/09–10 ದಿನಾಂಕ: 28.07.2009ರ ಪ್ರಕಾರ ಟೆಂಡರ್ ಹಾಕುವ ದಿನಾಂಕವನ್ನು 07.08.2009ರಂದು ಎಂದು ನಿಗದಿಗೊಳಿಸಲಾಗಿತ್ತು. ಈ ಸಂಬಂಧ ಖಾಲಿ ಟೆಂಡರ್ ಪೆಟ್ಟಿಗೆಗಳನ್ನು ಈ ಕೆಳಗಿನ ಸ್ಥಳದಲ್ಲಿ ಟೆಂಡರ್ ಸ್ವೀಕರಿಸುವ ಸಲುವಾಗಿ ಇಡಲಾಗಿತ್ತು.

1. ವ್ಯವಸ್ಥಾಪಕ ನಿರ್ದೇಶಕರು, ನೋಂದಾಯಿತ ಕಛೇರಿ, ಕನೀನಿನಿ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೇಂದ್ರ ಕಛೇರಿ, ಕನೀನಿನಿ, ವಾಲ್ಮಿ, ಧಾರವಾಡ.
3. ಮುಖ್ಯ ಇಂಜಿನಿಯರ್, ಕನೀನಿನಿ, ಯು.ಟಿ.ಪಿ. ವಲಯ, ಶಿವಮೊಗ್ಗ.
4. ಕಾರ್ಯಪಾಲಕ ಇಂಜಿನಿಯರ್, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.

ಅದರ ಪ್ರಕಾರ ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಕನೀನಿನಿ, ಬೆಂಗಳೂರು ಇಲ್ಲಿ ನಾಲ್ಕು ಏಜೆನ್ಸಿಯವರು ಮಾತ್ರ ಮಾನುಯಲ್ ಮೂಲಕ ಟೆಂಡರ್ ಸಲ್ಲಿಸಿರುತ್ತಾರೆ. ಉಳಿದ ಮೂರು ಸ್ಥಳಗಳಲ್ಲಿ ಯಾವುದೇ ಏಜೆನ್ಸಿಯವರು ಟೆಂಡರ್ ಹಾಕಿರುವುದಿಲ್ಲ ಹಾಗೂ ಇ–ಟೆಂಡರ್‌ನಲ್ಲಿ ಸಹ ಯಾವುದೇ ಗುತ್ತಿಗೆದಾರರು ಬಿಡ್ಡನ್ನು ಸಲ್ಲಿಸಿರುವುದಿಲ್ಲ. ಮಾನುಯಲ್ ಮೂಲಕ ಟೆಂಡರ್ ಹಾಕಿರುವವರ ವಿವರಗಳು ಈ ಕೆಳಗಿನಂತಿದೆ.

1. ಮೇ. ಜಿ. ವಿ. ಪಿ.ಆರ್. ಇಂಜಿನಿಯರ್ಸ್, ಹೆದರಾಬಾದ್.
2. ಮೇ. ಎ. ಪಿ. ಆರ್. ಕನ್ಸ್ಟ್ರಕ್ಷನ್ಸ್, ಹೆದರಾಬಾದ್.
3. ಮೇ. ಎಸ್. ಎನ್. ಸಿ. ಪವರ್ ಕಾರ್ಪೋರೇಷನ್, ಬೆಂಗಳೂರು.
4. ಶ್ರೀ ಡಿ. ವೈ. ಉಪ್ಪಾರ, ಬೆಂಗಳೂರು.

ಇವರು ಭರ್ತಿ ಮಾಡಿದ ಟೆಂಡರ್‌ನ್ನು ಮಾನುಯಲ್ ಮೂಲಕ ಸಲ್ಲಿಸಿರುತ್ತಾರೆ. ನಿಗದಿ ಪಡಿಸಿದಂತೆ ದಿನಾಂಕ: 10.08.2009ರಂದು ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಕನೀನಿನಿ, ಬೆಂಗಳೂರು ಇಲ್ಲಿ ಹಾಜರಿದ್ದು, ಗುತ್ತಿಗೆದಾರರ ಸಮ್ಮುಖದಲ್ಲಿ ಟೆಂಡರ್ ಪಟ್ಟಿಗೆಯನ್ನು ತೆರೆಯಲಾಯಿತು (ಹಾಜರಾತಿ ಮುಸ್ತಕದಲ್ಲಿದಂತೆ). ಈ ಕೆಳಗಿನಂತೆ ಗುತ್ತಿಗೆದಾರರು ದರವನ್ನು ಸೂಚಿಸಿರುತ್ತಾರೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಸೂಚಿಸಿದ ದರ | ಇಎಂಡಿ ಮೊತ್ತ |
|---|---|---|---|
| 1 | M/s. G. V. P. R. Engineering, Hyderabad. | 46% ಹೆಚ್ಚು | ಬ್ಯಾಂಕ್ ಗ್ಯಾರೆಂಟಿ ರೂ. 107.00 ಲಕ್ಷ |
| 2 | M/s. S. N. C. Power Corporation Ltd., Bangalore | 48% ಹೆಚ್ಚು | - ''- |
| 3 | M/s. A.P. R. Construction, Hyderabad | 52% ಹೆಚ್ಚು | - ''- |
| 4 | Sri D. Y. Uppar, Bangalore | 43% ಹೆಚ್ಚು | - ''- |

ಈ ಮೇಲಿನಂತೆ ಗುತ್ತಿಗೆದಾರರು / ಪ್ರತಿನಿಧಿಗಳು ಸಮ್ಮುಖದಲ್ಲಿ ಅವರು ಸೂಚಿಸಿರುವ ದರ ಮತ್ತು ಇಎಂಡಿಗಳನ್ನು ರಿಜಿಸ್ಟಾರ್‌ನಲ್ಲಿ ದಾಖಲು ಮಾಡಲಾಯಿತು. ಮೇಲಿನ ನಾಲ್ಕು ಏಜೆನ್ಸಿಯವರು ಸಲ್ಲಿಸಿದ ಟೆಂಡರ್‌ನಲ್ಲಿ Sri D. Y. Uppar, Bangalore ಇವರು ಕಡಿಮೆ ದರ ಅಂದರೆ ಶೇಕಡ 43% ರಷ್ಟು ಹೆಚ್ಚುವರಿಯನ್ನು ಷಡ್ಯೂಲ್ – ಬಿ ದರಪಟ್ಟಿಯ ಮೇಲೆ ನಮೂದಿಸಿರುತ್ತಾರೆ. ಈ ಮೇಲಿನ ನಾಲ್ಕು ಏಜೆನ್ಸಿಗಳಲ್ಲಿ Sri D. Y. Uppar, Bangalore ರವರು ಕಡಿಮೆ ದರವನ್ನು ನಮೂದಿಸಿರುವುದರಿಂದ ಹಾಗೂ ನಿಗದಿತ ಇಎಂಡಿಯನ್ನು ಸಲ್ಲಿಸಿರುವುದರಿಂದ ಇವರ ಟೆಂಡರ್‌ನ್ನು ಅಂಗಿಕರಿಸಲು ಶಿಫಾರಸ್ಸಿನೊಂದಿಗೆ ಸಲ್ಲಿಸಲಾಗುವುದು.

**ಸಹಿ/-**
**ಕಾರ್ಯಪಾಲಕ ಇಂಜನಿಯರ್,**
**ಕನೀನಿನಿ, ಡಂಡಾವತಿ ಜಲಾಶಯ ಯೋಜನಾ ವಿಭಾಗ,**
**ಶಿಕಾರಿಪುರ.**

| **ಹಾಜರಿದ್ದ ಅಧಿಕಾರಿಗಳು:~** | **ಹಾಜರಿದ್ದ ಗುತ್ತಿಗೆದಾರರು / ಪ್ರತಿನಿಧಿಗಳು:~** |
|---|---|
| 1. ಶ್ರೀ ಎ. ಎಸ್. ಮುರಳಿಧರ್ ರಾವ್,<br>ಕಾರ್ಯಪಾಲಕ ಇಂಜನಿಯರ್ | 1. ಮೇ. ಜಿ. ವಿ. ಪಿ.ಆರ್. ಇಂಜಿನಿಯರ್ಸ್, ಹೆದರಾಬಾದ್. |
| 2. ಶ್ರೀ ಸುರೇಶ್ ಮೇಟಿ,<br>ಸಹಾಯಕ ಇಂಜಿನಿಯರ್ | 2. ಮೇ. ಎ. ಪಿ. ಆರ್. ಕನ್ಸ್ಟ್ರಕ್ಷನ್ಸ್, ಹೆದರಾಬಾದ್. |
| 3. ಶ್ರೀ ಎಸ್.ಪರಮೇಶ್ವರ್ ರಾವ್,<br>ಲೆಕ್ಕ ಅಧೀಕ್ಷಕರು. | 3. ಮೇ. ಎಸ್. ಎನ್. ಸಿ. ಪವರ್ ಕಾರ್ಪೋರೇಷನ್,<br>ಬೆಂಗಳೂರು. |
| | 4. ಶ್ರೀ ಡಿ. ವೈ. ಉಪ್ಪಾರ, ಬೆಂಗಳೂರು |

ಸಂಖ್ಯೆ: ಕಾಇಂ/ದಜಯೋವಿ/ಟೆಂಡರ್/2009–10/ ದಿನಾಂಕ: 10.08.2009

ಕ್ಯಾಂಪ್: ಬೆಂಗಳೂರು

1. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಪ್ರತಿಯನ್ನು ಮುಖ್ಯ ಇಂಜಿನಿಯರ್, ಕನೀನಿನಿ, ತು.ಮೇ.ಯೋ. ವಲಯ, ಶಿವಮೊಗ್ಗ ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಪ್ರತಿಯನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್, ಕನೀನಿನಿ, ತು.ಮೇ.ಯೋ. ವೃತ್ತ, ಶಿವಮೊಗ್ಗ ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

**ಕಾರ್ಯಪಾಲಕ ಇಂಜನಿಯರ್,**
**ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ,**
**ಶಿಕಾರಿಪುರ.**